ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	218
2	ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್
3	ಉತ್ತರಿಸುವ ದಿನಾಂಕ	:	19-07-2019
4	ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2013-14 ರಿಂದ 2016-17ರ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಂಗ್ರಹಿಸಿದ ಆಸ್ತಿ ತೆರಿಗೆಯ ಮೊತ್ತವೆಷ್ಟು;	ಬೃಹತ್ ಬೆಂಗಳೂರು ಮಹಾನಗಳ ಪಾಲಿಕೆ ವ್ಯಾಪ್ತಿಯಲ್ಲಿ 2013-14 ರಿಂದ 2016-17ರ ಅವಧಿಯಲ್ಲಿ ಈ ಕೆಳಕಂಡಂತೆ ಆಸ್ತಿ ತೆರಿಗೆ ಸಂಗ್ರಹಿಸಲಾಗಿರುತ್ತದೆ.
ಆ)	2013-14 ರಿಂದ 2016-17ರ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆಸ್ತಿ ತೆರಿಗೆಯ ಮೇಲೆ ಯಾವ ಯಾವ ಸೆಸ್‌ಗಳನ್ನು ಹೆಚ್ಚುವರಿ ತೆರಿಗೆಯ ರೂಪದಲ್ಲಿ ಹಾಕಲಾಗಿತ್ತು; ಈ ಸೆಸ್ ಹೆಚ್ಚುವರಿ ತೆರಿಗೆಯ ಪ್ರಮಾಣವೆಷ್ಟು; ಈ ಹೆಚ್ಚುವರಿ ತೆರಿಗೆಯನ್ನು ಯಾವ ಕಾರಣಕ್ಕಾಗಿ ಬಳಸಬೇಕಾಗಿತ್ತು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಗ್ರಹಿಸಲಾಗುತ್ತಿರುವ ಆಸ್ತಿ ತೆರಿಗೆ ಜೊತೆಯಲ್ಲಿ ಆರೋಗ್ಯ, ಭಿಕ್ಷುಕರ, ಗ್ರಂಥಾಲಯ ಉಪಕರವನ್ನು ಸಂಗ್ರಹಿಸಲಾಗುತ್ತಿದೆ. ಈ ರೀತಿ ಸಂಗ್ರಹಿಸಲಾದ ಆರೋಗ್ಯ, ಭಿಕ್ಷುಕರ, ಗ್ರಂಥಾಲಯ ಉಪಕರವನ್ನು ಸಂಬಂಧಪಟ್ಟ ಇಲಾಖೆ ವರ್ಗಾಯಿಸಬೇಕಾಗಿರುತ್ತದೆ.
ಇ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2013-14 ರಿಂದ 2016-17ರ ಅವಧಿಯಲ್ಲಿ ಆಸ್ತಿ ತೆರಿಗೆಯ ನಗರ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ವಿಧಿಸಿರುವ ಹೆಚ್ಚುವರಿ ತೆರಿಗೆಯೇತರ (ಸೆಸ್) ಪ್ರಮಾಣವೆಷ್ಟು; ಈ ಮೂಲಕ ಸಂಗ್ರಹಿಸಲಾದ ತೆರಿಗೆಯ ಮೊತ್ತವೆಷ್ಟು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರ ಭೂಸಾರಿಗೆ ಉಪಕರವನ್ನು ಸಂಗ್ರಹಿಸುತ್ತಿರುವುದಿಲ್ಲ.

ಕ್ರ.ಸಂ	ವರ್ಷ	ಸಂಗ್ರಹಿಸಲಾಗಿರುವ ಆಸ್ತಿ ತೆರಿಗೆ (ರೂ.ಕೋಟಿಗಳಲ್ಲಿ)
1	2013-14	1323.18
2	2014-15	1810.15
3	2015-16	1960.19
4	2016-17	1997.27

...2.

ಈ)	ಈ ಹೆಚ್ಚುವರಿ ತೆರಿಗೆಯನ್ನು ಸಂಗ್ರಹಿಸಿಲ್ಲವೆಂದಾದಲ್ಲಿ ಅದಕ್ಕೆ ಕಾರಣಗಳೇನು; ಯಾವ ಅಧಿಕಾರಿಯನ್ನು ಜವಾಬ್ದಾರರನ್ನಾಗಿಸಲಾಗಿದೆ; ಈ ತೆರಿಗೆ ನಷ್ಟವನ್ನು ಸಂಬಂದಿಸಿದ ಅಧಿಕಾರಿಯಿಂದ ವಸೂಲಿ ಮಾಡಲು ತೆಗೆದುಕೊಂಡ ಕ್ರಮಗಳೇನು?	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರ ಭೂಸಾರಿಗೆ ಉಪಕರವನ್ನು ಸಂಗ್ರಹಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಲು → ಕ್ರಮ ಜರುಗಿಸಲಾಗಿದೆ

ಸಂಖ್ಯೆ: ನಅಇ 62 ಎಂಎನ್‌ಯು 2019

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು